# ಅನುಬಂಧ

## ಹೆಚ್ಚಿನ ಪದ್ಯಗಳು

`ಖ' ಪ್ರತಿಯ ೪ ನೆಯ ಸಂಧಿಯಲ್ಲಿ ೨೦ ನೆಯ ಪದ್ಯದ ಅನಂತರ :

ಮುರುಹ ಮೋಹನ ಚಾರು ಕಟ್ಟಣೆ
x x x x x ಕ್ರಮಗಳ ತಿಳಿದು
x x x x   x x x   x x x   x x x
ವರವಿಲಾಸವ ಪುತ್ರಿಕೆಯಲೊ
ವರ್ಣರಿಗೆ ಚಿತ್ರವಿದೆನಲು ವಿದ್ಯಾ
ಧರನಿತಂಬಿನಿ ನಟಿಸುತಿರ್ದಳು ನಾಟ್ಯರಂಗದಲಿ ೨೧

ಎಲ್ಲಿ ಹಸ್ತವ ನೀಡಿದಳು ಮ
ತ್ತಲ್ಲಿ ನೆಲದೃಷ್ಟಿಗಳು ವಿಭ್ರಮ
ದಲ್ಲಿ ರಂಜಿಸೆ ಸಹಿತ ಮುಖದಿಂ ಹವಹೊಱಸೂಸೆ
ಎಲ್ಲಿ ಪದಗಳನಿಟ್ಟು ನರ್ತಿಪ
ಳಲ್ಲಿ ಸೊಗಸೆ ವಿಲಾಸಮನಸಿನ
ಗಲ್ಲದಿಂ ಕೇಳ್ಭಾವಮೊಪ್ಪಲು ನಟಿಸಿದಳು ರಮಣಿ ೨೨

ಚರಣದಂದುಗೆಯುಲುಹು ಮುರಜ
ಸ್ವರಪಳಿಯಲು ಕರದ ಕಂಕಣ
ದುಱು ತದಗಿತಾಳಗಳುಱು ಗೊರವನುರಿಜಯಿಸೆ

ಸರಸಿಜನನಕೆಱಗುವಳಿಗಳ
ಮೊರಹು ಗಾನದ ಮಱಸೆ ಸತಿಯೊಳ
ಗಿರಲು ತೂರ್ಯತ್ರಯವು ಮೋಹನವಯ್ತು ಆ ನಾಟ್ಯ ೨೩

ನುತಘನಾಲಂಕಾರ ವರುಷಾ
ರುತುವಿನೊಲುಯೊಳಗಿರಲು ಚಾಗಿಯೊಲೆಶೋರಾ
ಜಿತಪಯೋನಿಧಿಯೊಲ್ಪವಾಳ ವಿಭೂಷನಭದಂತೆ
ಅತಿಶಯಾರ್ಥ ಹಿಮಾಂಶುರಮ್ಯ
ಕ್ಷಿತಿಪ ಬಲದಂತುಱ ಪತಾಕಾ
ಯುತಯುಗದ x x x ತಾಸಾದ್ಯಾ ೨೪

ಸರಸತಿಯು ಕರುಮಾಡದಗ್ರದೊ
ಳಿರುವವೇದಿಯ ಖಚರಾಂಗನೆ
ಯರಿಗೆ ಮದ್ದಳೆ ತಾಳ ಸಂಗೀತಗಳ ಪವಣಿನಲಿ
ಭರತಶಸ್ತ್ರಕ್ರಮದ ತಿಳಿಪುವ
ಪರಿಯೊಲಾ ಸತಿರಂಭೆಯೂರ್ವಶಿ
ಯರಿಗೆ ಮಿಗಿಲೆಂದೆನಿಪ ರಚನೆಯ ತೋಱು ಸರಿಸಿದಳು ೨೫

‘ಖ’ ಪ್ರತಿಯ ೯ ನೆಯ ಸಂಧಿಯಲ್ಲಿ ೧೪ ನೆಯ ಪದ್ಯದ ಅನಂತರ:

ಹೊನ್ನ ಕೊಪ್ಪರಿಕೆಗಳೊಳಗೆ ಬಾ
ವನ್ನ ಕತ್ತುರಿಪಚ್ಚೆ ಕರ್ಪೂರ

ಬಿನ್ನಣದಿ ಪನ್ನೀರೊಡನೆ ಕಡದಿರ್ದವಲ್ಲಲ್ಲಿ
ರನ್ನದಿಂದೊಡರಿಸಿದಮಣಿಗಣ
ಚಿನ್ನದಾಸರ ಪಣೆಗಳಿಗೆಗಟ್ಟಿರ್ಕೈ
ಮನ್ನೆಯರ ಸುತರಿರೆ ತೂಗಿಸಿಕೊಂಬ ರಚನೆಯಲಿ ೧೫

'ಖ' ಪ್ರತಿಯ ೯ ನೆಯ ಸಂಧಿಯಲ್ಲಿ ೨೦ ನೆಯ ಪದ್ಯದ ಅನಂತರ:

ಅನಿಲಪದದಲಿ ತೆರಳಿ ಶಶಿವೇ
ಗನನಗರ ತಾನೊಂದು ಯೋಜನ
ವೆನಲು ಭೂತಳಕಿಳಿದು ವೈಭವದಿಮಿಬ್ಬ X X ದಾ
ಘನತೆಯ X X ಮಾಳ್ಪಪುರಿಯ
ಜನರು ನೋಡಲಿಯ್ಯಂದುದಿಗ್ದೆ
ಮರಸಲರತಂದರಂಬರ ಕುಲಾಧಿಪರು ೨೧

'ಖ' ಪ್ರತಿಯ ೯ ನೆಯ ಸಂಧಿಯಲ್ಲಿ ೬೭ ನೆಯ ಪದ್ಯದ ಅನಂತರ:

ಘಳಿಗೆ ವಟ್ಟಲ ನೋಡತರಾ X X
X X X X X X ಸಂ
ಕಲದಯೋಗವ ತಿಳಿದು ಲಗ್ನವ ನಿರ್ಧರಿಸದಿಂತೂ
ತಳುವಿದೇತಕೆ ವೇಳೆಯಾಯ್ತೆಂ
ದಲದು ಕೂಗೆ ಪುರೋಹಿತಮಂ
ಗಳ ಮಹಾಷ್ಟಕಗಳನು ತೊಡಗಿದರಖಿಲ ಭೂಸುರರು ೬೮

‘ಖ’ ಪ್ರತಿಯ ೧೦ ನೆಯ ಸಂಧಿಯಲ್ಲಿ ೪೬ ನೆಯ ಪದ್ಯದ ಅನಂತರ:

ಮುಟ್ಟಬೇಡಲೆ **X X X** ಮನ
ಸಿಟ್ಟಿನೊರೆದವಲಾ ನೃಪತಿಯನು
ಬಿಟ್ಟು **X X X** ವನು ಬಂಧುಬಳಗವನೆಲ್ಲ ಮಿಗೆ ತೊಱೆದು
ಪಟ್ಟಮನನನಿವ ಭಾಷೆಯ
ಕೊಟ್ಟರೈ ದುಡುಕೆನಲು ನೃಪ ನೊಡ
**X X X** ಪತಿಯನು ಸಂತವಿಸಿ ಕೂಡಿದನುರಾಗದಲಿ ೪೭

‘ಖ’ ಪ್ರತಿಯ ೧೨ ನೆಯ ಸಂಧಿಯಲ್ಲಿ ೬ ನೆಯ ಪದ್ಯದ ಅನಂತರ:

ಅಸ್ತವಾರ್ಧಿಯ ದಾಂಏ ಕುಲಗಿರಿ
ವಿಸ್ತರವ ವರುಷಗಳನೆಳಸುಮ
ಸೂಸ್ತವಿಭವದಿ ದೇಹವ್ಯೆರಾವತದ ಭಿಮಿಗಳು
ಪ್ರಸ್ತುತದ ಹೂವಣ್ಣವಾದಗ
ಭಸ್ಸಿನೇತ್ರದಿ ನೋಡಿ ಬೆಳಗುತ
ಮಸ್ತಕವನೇಱಿದನು ದಿನಕರನುದಯಪರ್ವತವಾ ೭

‘ಖ’ ಪ್ರತಿಯ ೧೨ ನೆಯ ಸಂಧಿಯಲ್ಲಿ ೧೧ನೆಯ ಪದ್ಯದ ಅನಂತರ:

ಮೃದು ಮಧುರ ನಯ ಮಂದ್ರತಾರಕ
ಪದಗಿದ ಕ್ರಮದುನ್ನತದೆ ತಾ
ಳದ ಹವಣು ಕೊಂದ ಕಂಪಿತದೊ ಗಮಕದೊಗ್ಗಿನಲಿ
ಸುದತಿಯರು ಸಂತಸದಿ ಸರಿಗಮ

ಪದನಿಸ ಸ್ವರಗಳಲಿ ಕಿನ್ನರ
ಪದಗಳಂತುಱಿ ಪಾಡಿದರು ಸವಿದಾನದೇಳ್ಗೆಯಲಿ ೧೨

'ಖ' ಪ್ರತಿಯ ೧೨ ನೆಯ ಸಂಧಿಯಲ್ಲಿ ೭೦ ನೆಯ ಪದ್ಯದ ಅನಂತರ:

ಸೆರೆಬಿಗಿದು ಮೈಯುಬ್ಬಿರೋಮಾಂ
ಕುರಗಳಾಂತವು ಜಲಕಣಂಗಳ
ಸರಿಯಲಾನಂದಾಶ್ರು ಕಂಪಿಸಿತಂಗಸಾತ್ವಿಕಾ
ಭರತಲಕ್ಷನದೋರಲಿರ್ವ‌ರು
ಪರಮ ಸಂತೋಷಾಂಬುರಾಸಿಯೊ
ಳುಱು ಮೊದದಿವಿಮುಳುಗಿದರು ತಡಿಗಾಣರುಮನೋತ್ಸವದಿ ೭೧

'ಖ' ಪ್ರತಿಯ ೧೩ ನೆಯ ಸಂಧಿಯಲ್ಲಿ ೧೮ ನೆಯ ಪದ್ಯದ ಅನಂತರ:

ಪಡೆದ ಜಗದಿಯ X X X ದರದೊ
ಳೊಡಳೊಡನೆಯನುರಾಗತಿತಲದಿ
ವಿಡಿದ ಸುಧೆಯಂ ತುಂಬಿ ತುಳುಕಿಸಿ ಮಮತೆ ಮೇರೆಯಲಿ
ನಡೆವ ಸುತನೇ ಸುಖದ ನಿಧಿ ಕಂ
ಗೆಡಸಿ ಪೆತ್ತರ ಪೊಡೆಯ ಸುಣ್ಣದ
ಹುಡಿಕದಿವೊಲುಕಿಸುವಪು X X X X X ೧೯

'ಖ' ಮತ್ತು 'ಗ' ಪ್ರತಿಗಳ ೧೫ ನೆಯ ಸಂಧಿಯಲ್ಲಿ ೨೦ ನೆಯ ಪದ್ಯದ ಅನಂತರ:

ಇಂದು ಮೊಗವನು ಕಾಣ[1]ಬಾರದು
ನಿಂದಿತಹೊ ನಿಜವಾಗಿ ಕತ್ತಲೆ
ಯಂದರನುಪಮ ವಾಸೆಯೇ ಪೇಳ್ವಲ್ಲ ನೀ [2]ನೆಂ[2]ದ
[3]ಸೌಂ[3] ದರಿಯ ನುಡಿಗೇಳಿಹದ
ಹಿಂದೆಸಗೆಯ ಮಾಳ್ಪನೆದೆ [4]ಯೊಳು[4]
ನೊಂದು ಪೋಗುತ್ತಿರ್ದನೊರ್ವನು ತನ್ನ ಮಂದಿರಕೆ ೨೧

'ಖ' ಪ್ರತಿಯ ೧೫ ನೆಯ ಸಂಧಿಯಲ್ಲಿ ೨೬ ನೆಯ ಪದ್ಯಕ್ಕೆ ಮೊದಲು:

ಕುಮುದವನಮಾಲಾ ವಿಭೂತಕ್ಷಣ
ಕಮಲಗೇಹೋಲಂಕೃತನು ಸುರ
ಸಮಿತಿಸೇವ್ಯದ್ವಿಜಕುಲೇಶ್ವರ ರಮ್ಯಸಂಜನಿತಾ
ಸುಮನಸಾಯುಧ ಸಾಗರಪ್ರಿಯ
**X** ಮಮಲೋಕಾನಂದಕಾಚಂ
ದ್ರಮನುಕೃಷ್ಣಾಂಕದಲಿ ರಂಜಿಸುತಿರ್ದ ನೋಡೆಂದ ೨೫

---

೧ ಬಾರದು (ಖ) ೨ ಬ (ಖ) ೩ ಸವುಂ (ಗ) ೪ ಯೊ (ಖ)

# ಶಬ್ದ ಕೋಶ

ಅಂಗಚಿತ್ತ ೭–೨೯ ಉಡುಗೊರೆ, ಬಹುಮಾನ.

ಅಂಡೆ ೫೨–೬ ಜೀರ್ಕೊಳವೆ.

ಅಕೃತ್ರಿಮ ೧೨–೫ ಕೃತ್ರಿಮವಲ್ಲದ, ಸಹಜವಾದ. (ಮೇರು ಮುಂತಾದ ದೊಡ್ಡ ಪರ್ವತಗಳ ಮೇಲಿರುವ ಜಿನಮಂದಿರಗಳು ಬಹಳ ದೊಡ್ಡವೂ ಸಹಜವೂ ಆಗಿರುತ್ತವೆ.)

ಅಗಡುತನ ೬೮–೩೦ ಪಳಗದಿರುವಿಕೆ, ಒರಟು.

ಅಡರು ೨೪–೬ ಹತ್ತು, ಏರು.

ಅಡಸು ೪೪–೧೩ ಉಂಟಾಗು.

ಅಣೆ ೯೮–೫೭ ಸಮಿಪಿಸು.

ಅನುವಡಿಸು ೭೧–೪೭ ಅನುಗೊಳಿಸು, ಸಿದ್ಧಪಡಿಸು.

ಅಪವರ್ಗ ೧೯೯–ಸೂಚನೆ: ಮೋಕ್ಷ.

ಅಭ್ಯುತ್ಥಾನ ೮೨–೪೦ ಏಳುವಿಕೆ.

ಅಮರಿಸು ೧೧೮–೫ ಸೇರಿಸು, ಹೊಂದಿಸು.

ಅಮರ್ದು ೧೪೪–೨ ಅಮೃತ.

ಅರಿದು ೨೪–೭ ಅಸಾಧ್ಯ, ಅಶಕ್ಯ.

ಅಱಿಪು ೨–೬ ತಿಳಿಸು, ಹೇಳು.

ಅರ್ಣ್ಣಜ ೧೮೧–೬೪ ತಾವರೆ.

ಅರ್ಹ ೫–೧೯ ಅರುಹಂತ.

ಅಲಘು ೨೫–೮ ಹಗುರವಲ್ಲದ, ದಟ್ಟವಾದ

ಅವಧಿಜ್ಞಾನ ೧೯೨– ೩೧ ಸ್ಥೂಲ ಇಂದ್ರಿಯಗಳಿಗೆ ಅಗೋಚರವಾದ ಪದಾರ್ಥಗಳ ಬಗ್ಗೆ ಅಸಾಧಾ

–ರಣವಾದ ಅನುಭೂತಿಯಿಂದ ಉಂಟಾಗುವ ಜ್ಞಾನ.

ಅವಾಚಿ ೧೪–೧೬ ದಕ್ಷಿಣ ದಿಕ್ಕು.

ಅಷ್ಟಕರ್ಮ(ಕರ್ಮಾಷ್ಟಕ) ೧–೩ ಜೈನ ಧರ್ಮದಂತೆ ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಹನೀ

–ಯ, ಆಯುಷ್ಯ, ನಾಮ, ಗೋತ್ರ, ಅಂತರಾಯ ಎಂಬ ಎಂಟು ಕರ್ಮಗಳು.

ಅಷ್ಟಗುಣ ೧–೩ ಜ್ಞಾನ, ದರ್ಶನ, ಅವ್ಯಾಬಾಧ, ಸಮ್ಯಕ್ತ್ವ, ಅವಗಹನ, ಸೂಕ್ಷ್ಮತ್ವ, ಅಗುರುಲಘು

–ತ್ವ, ವೀರ್ಯ ಎಂಬ ಎಂಟು ಗುಣಗಳು.

ಅಷ್ಟಪ್ರಾತಿಹರ್ಯ ೯–೩೬ ಅಶೋಕವೃಕ್ಷ, ಸುರಪುಷ್ಪವೃಷ್ಟಿ, ದಿವ್ಯಧ್ವನಿ, ಚತುಷ್ಷಷ್ಟಿಚಾಮರ, ರತ್ನಖಚಿತ

–ಸುವರ್ಣ ಸಿಂಹಾಸನ, ಪ್ರಭಾವಲಯ, ದೇವದುಂದುಭಿ, ಛತ್ರ ತ್ರಯಗಳು.

ಆಗಾರ ಫಲ ೨೦೮–೪೦ (ಜೈನ) ಗೃಹಸ್ಥ ಧರ್ಮ.

ಆಚಾರ್ಯ ೨–೪ ದಶವಿಧ ಧರ್ಮ, ಹನ್ನೆರಡು ವಿಧವಾದ ತಪಸ್ಸು, ಪಂಚಾಚಾರ, ಷಡಾವಶ್ಯಕ

ಕ್ರಿಯೆ. ತ್ರಿಗುಪ್ತಿ ಎಂಬ ಮೂವತ್ತಾರು ಗುಣಗಳುಳ್ಳವರು.

ಆಢಕಿ ೧೬೩–೧೩ ಬೇಳೆ.

ಆದೇಶ ಪುರುಷ ೫೫–೧೯ ಸೂಚಿತ ವ್ಯಕ್ತಿ.

ಆಮೋದಾಂಬು ೪೨–೬ ಸುವಾಸನೆಯ ನೀರು

ಆಯತ ೫೯–೩೭ ಸಮ್ಮತ, ಒಪ್ಪಿಗೆ.

ಆಱಿಡಿ ೧೬೮–೪ ವೈರ, ದ್ವೇಷ.

ಆಲು ೪೪–೧೨ ಗರ್ಜಿಸು.

ಆಶಾ ೧೨೬–೨ ದಿಕ್ಕು.

ಆಳ್ವೇರಿ ೧೮೯–೧೭ ಕೋಟೆಯ ಗೋಡೆ

ಇಕ್ಕಡಿ ೭೯೨೬ ಎರಡು ತುಂಡು.

ಇಕ್ಕೆ ೮೮–೧೩ ಆವಾಸ, ನೆಲೆ.

ಇಱು ೧೬೮–೬ (೧) ಚುಚ್ಚು, ತಿವಿ, (೨) [ಗಣಿತದಲ್ಲಿ] ಗುಣಿಸು.

ಈಡಿಱು ೧೧೪–೪೩ ರಭಸದಿಂದ ಮುಂದುವರಿ.

ಈರಾಱು ೮–೩೧ ಎರಡು ಆರು, ಹನ್ನೆರಡು.

ಉತ್ತರಾಪೋಶನ ೧೬೫–೨೨ ಊಟವಾದ ಮೇಲೆ ಮಂತ್ರ ಪೂರ್ವಕ ತೆಗೆದುಕೊಳ್ಳುವ ನೀರು

ಉತ್ಸೇಧ ೧೪–೧೩ ಎತ್ತರ.

ಉದುರೆಗಾಯ್ ೧೬೮–೯ ಉದುರುದುರಾಗಿ ಮಾಡಿದ ತಾಳಿದದ ಒಂದು ವಿಧ.

ಉಪಪತಿ ೧೧೩–೩೯ ಮಿಂಡ.

ಉಪಹತಿ ೪೪–೧೩ ತೊಂದರೆ.

ಉಪಾಧ್ಯಾಯ ೨–೫ ಪಂಚಪರಮೇಷ್ಠಿಗಳಲ್ಲಿ ಒಬ್ಬ.

ಉರವಣಿಸು ೨೦೦–೩ ಒಂದರ ಮೇಲೊಂದು ಬರು.

ಊಣಯ ೪೫–೨೦ ತೀವ್ರತೆ, ವೇಗ.

ಋದ್ಧಿ ೨೦೦–೬ ಏಳಿಗೆ, ಕ್ಷೇಮ.

ಎಡಱು ೩–೧೦ ತಪ್ಪು, ದೋಷ.

| | | |
|---|---|---|
| ಎರವು | ೧೯೬–೪೮ ಕಡ, ಸಾಲ. | |
| ಎಲಗೆ | ೬೮–೩೩ ಎಲೇ, ಲೇ. | |
| ಐದು | ೯೦–೨೩ ಹೊಂದು, ಸೇರು. | |
| ಐರೆವೆಣ್ಣು | ೫೭–೩೦ ಪೂರ್ಣ ಕುಂಭವನ್ನು ಹಿಡಿದು ಬರುವ ಹೆಂಗಸು. | |
| ಒಬ್ಬುಳಿ | | ೯೯–೬೧ ಗುಂಪು, ಸಮೂಹ. |
| ಒಲೆ | ೫–೨೨ ತೊನೆ, ಅಲೆ. | |
| ಒಸರಿಸು | ೩–೧೩ ಸ್ರವಿಸು, ಹೊರಬರು. | |
| ಓಪ | ೧೯–೩೭ ಪ್ರಿಯ, ನಲ್ಲ. | |
| ಕಂಪಿತ | ೩೫–೧೫ (ಹಾಡುಗಾರಿಕೆಯಲ್ಲಿ) ಧ್ವನಿ ನಡುಗುವುದು, ಸ್ವರಗಳ ಕಂಪನ. | |
| ಕಂಬುಗ್ರೀವ | ೧೧೦–೨೫ ಶಂಖದಂತಹ ಕತ್ತುಳ್ಳುದು. | |
| ಕಚ್ಛಪ | ೧೧–೨ ಆಮೆ. | |
| ಕಟಕ | ೮೧–೩೮ (೧) ರಾಜಧಾನಿ (೨) ಕಡಗ (೩) ಸೈನ್ಯ. | |
| ಕಡವರ | | ೩೮–೨೮ ನಿಧಿ. |
| ಕಬಂಧ | | ೧೨–೪ ನೀರು. |
| ಕಮ್ಮೆಣ್ಣೆ | | ೯೧– ೨೮ ಕಂಪಾದ ಎಣ್ಣೆ, ಸುವಾಸನೆಯ ಎಣ್ಣೆ. |
| ಕರ | ೧೫೨–೩೮ ಸೊಂಡಿಲು. | |
| ಕರಂಡಕ | ೧೯–೩೫ ಭರಣಿ, ಡಬ್ಬಿ. | |
| ಕರಜಿಕಾಯ್ | ೧೬೮–೧೭ ಒಂದು ವಿಧ ಸಿಹಿತಿಂಡಿ. | |
| ಕರಣೆ (ಕರಣ) | ೩೬–೧೯ ನಾಟ್ಯಪ್ರಭೇದ; ಕೈ, ಕಾಲು, ತಲೆ ಮೊದಲಾದ ಅಂಗಗಳನ್ನು | |
| ರಸಾಭಾಸವಾ | | |
| | –ಗದಂತೆ ಪ್ರೇಕ್ಷಕರಿಗೆ ಮನರಂಜನೆ ಮಾಡುತ್ತ ಹಾವಭಾವಗಳಿಂದ ಕೂಡಿ | |
| | –ಚಲಿಸುವುದು. | |

| | |
|---|---|
| ಕರು | ೨–೮ ಹಿರಿಮೆ. |
| ಕರುವಿಡು | ೧೧೦–೨೫ ಎರಕ ಹೊಯ್ಯಿ, ಅಚ್ಚಿಗೆ ಹಾಕು. |
| ಕರ್ಣಿಕೆ | ೯–೩೬ (ಹೂವಿನ) ಬೀಜಕೋಶ. |
| ಕಲಿತ | ೧೮–೩೦ ಕೂಡಿದ, ಸೇರಿದ |
| ಕಲಿಲ | ೨೦೪–೨೧ ಅಸಮಾನ. |
| ಕಲುಹಾರ | ೩೦–೩೦ ಕಲ್ಹಾರ, ಕೆಂದಾವರೆ. |
| ಕಸವರ | ೩೮–೨೮ ಚಿನ್ನ. |
| ಕಳೇವರ | ೪೨–೫ ದೇಹ, ಶರೀರ. |
| ಕಾಕಳಿ | ೩೫–೧೬ ಎತ್ತರವಾದ ಧ್ವನಿ, ಮೂರು ವಿಧ ಸ್ವರಗಳಲ್ಲಿ ಒಂದು. |
| ಕಾರಣಾಶ್ವ | ೨೪–೭ ಅಸಾಮಾನ್ಯ ಕುದುರೆ? |
| ಕಾರಣೆ | ೮೭–೧೨ ಗೋಡೆಗೆ ಸುಣ್ಣ ತುಂಬಿದ ಮೇಲೆ ಅಲಂಕಾರಕ್ಕಾಗಿ ಕುಂಕುಮ, |
| ಕಾರಲಿ | |
| | –ಮುಂತಾದವುಗಳನ್ನು ಹಚ್ಚುವಿಕೆ. |
| ಕಾರವೆಲ್ಲಿ | ೧೬೨–೮ ಹಾಗಲಕಾಯಿ. |
| ಕಾಸಾರ | ೧೫–೨೧ ಕೊಳ, ಸರೋವರ. |
| ಕುರವಕ | ೧೭೬–೪೧ ಗೋರಂಟೆ, ಮದರಂಗಿ. |
| ಕುಲಾಯಿ | ೨೦೧–೧೨ ಕುಲಾವಿ, ಟೋಪಿ. |
| ಕೂರು | ೧೫೩–೪೦ ಹರಿತ. |
| ಕುಸಕ | ೧೩೯–೫೭ ಮೇಲ್ಕಟ್ಟು, ವಿತಾನ. |
| ಕೇಕರ | ೧೫೮–೬೨ ಓರೆ ನೋಟ, ಕಡೆಗಣ್ಣ ನೋಟ. |
| ಕೈವರ್ತಿಸು | ೧೬೭–೨ ಒಪ್ಪಿಸು. |
| ಕೊಂಡೆಯ | ೧೯೩–೩೯ ಪಿಸುಣ, ಚಾಡಿಕೋರ. |

| | |
|---|---|
| ಕೊಳುಗುಳ | ೨೩-೧ ಯುದ್ಧ |
| ಕೊರಕಿತ | ೨೮-೨೪ ಮೊಗ್ಗು ಬಿಟ್ಟ |
| ಕೋರಿ | ೫-೨೧ ಕುವರಿ. |
| ಖರ್ವಡ | ೨೭-೨೦ ಬೆಟ್ಟದಿಂದ ಸುತ್ತುವರಿಯಲ್ಪಟ್ಟ ಊರು. |
| ಖೇಟ | ೨೭-೨೦ ಬೆಟ್ಟ ಮತ್ತು ನದಿಗಳಿಂದ ಕೂಡಿದ ಊರು. |
| ಖೇಡಯ | ೯೯-೬೧ ಗುರಾಣಿ. |
| ಗಂಡೂಪದ | ೧೧-೨ ಎರೆಹುಳ. |

---

ವಿವರಗಳಿಗೆ ಆದಿಪುರಾಣ ೮-೬೩ ವಚನ ನೋಡಿ.

| | |
|---|---|
| ಗಂಧಕುಟಿ | ೮-೩೪ ಸಾಮಾನ್ಯ ಕೇವಲಿಗಳಿಗೆ ಕೇವಲ ಜ್ಞಾನವುಂಟಾದಾಗ ದೇವತೆಗಳು |
| ರಚಿಸುವ | |
| | ಮಂಟಪ. |
| ಗದ | ೨೦೫-೨೫ ರೋಗ. |
| ಗಭಸ್ತಿ | ೧೩೭-೫೧ ಕಾಂತಿ. |
| ಗರುವಿಕೆ | ೩೫-೧೫ (ಸಂಗೀತ) ಗತ್ತು. |
| ಗಹ್ವರ | ೨೭-೧೯ ಗುಹೆ. |
| ಗಹ್ವಲೆ | ೧೬೪-೧೭ ಗೋಧಿ ರವೆಯ ಸೇವಿಗೆ. |
| ಗಳಪು | ೩-೧೦ ಹರಟು. |
| ಗಾರಿಗೆ | ೧೬೪-೧೭ ಒಂದು ವಿಧ ಸಿಹಿ ತಿಂಡಿ. |
| ಗುಪ್ತಿನಿ | ೫೭-೨೮ (ಜೈನ) ಒಂದು ವಿದ್ಯದ ಹೆಸರು. |
| ಗೊತ್ತು | ೧೩-೯ ನೆಲೆ, ಆವಾಸ. |

ಘಾತಿಚತುಷ್ಟಯ ೨೦೭-೩೬ ಜ್ಞಾನ, ದರ್ಶನ, ಸುಖ, ಶಕ್ತಿ ಇತ್ಯಾದಿ ಜೀವನ ಗುಣಗಳನ್ನು ನಾಶ

ಮಾಡುವ ಕರ್ಮಗಳಿಗೆ ಘಾತಿ ಕರ್ಮಗಳೆನ್ನುತಾರೆ. ಈ ಕರ್ಮಗಳು ಜ್ಞಾನಾವರಣೀ

-ಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತ ರಾಯ ಎಂದು ನಾಲ್ಕು.

ಘುಟಿಕಾ ೨೧೧-೧೧ ಗುಳಿಗೆ, ಮಾತ್ರೆ.

ಚಂಚುಪುಟ (ಚಚ್ಚತ್ಪುಟ, ಚಾಚುಪುಟ) ೩೫-೧೩ ಮಾರ್ಗತಾಳಗಳಲ್ಲಿ ಒಂದು.

ಚಂಡಕರ ೪೮-೩೦ ಸೂರ್ಯ.

ಚಚ್ಚರಿ ೩೫-೧೩ ತಾಳ ಭೇದ (?)

ಚರು ೮೬-೫ ಹೋಮದ ಅನ್ನ.

ಚಾರಣಸಿದ್ಧ ೧೩-೧೦ ತಪಸ್ಸಿನ ಮೂಲಕ ಆಕಾಶಗಾಮಿನೀ ವಿದ್ಯೆಯನ್ನು ಸಾಧಿಸಿ ಮುಕ್ತನಾದವ.

ಚಾರಿ ೩೬-೧೯ ನಾಟ್ಯಭೇದ, ಕೋಮಲವಾಗಿಯೂ, ವಿಲಾಸದಿಂದಲೂ, ಅತಿ ವಿಳಂಬವಿ

-ಲ್ಲದೆ, ಅತಿ ವೇಗವಿಲ್ಲದೆ ತಾಳ ಮತ್ತು ಲಯಗಳಿಗನುಗುಣವಾಗಿ ಸೊಂಟ, ತೋಳು,

ಚರಣ, ತೊಡೆ, ಕಣ್ಣು, ಕಾಲು ಇವುಗಳನ್ನು ಒಟ್ಟಿಗೆ ಚಲಿಸುವುದು.

ಚಾರು ೮-೩೧ ಸುಂದರ, ಮನೋಹರ.

ಚಿತ್ರಶಾಲೆ ೩೯-೩೪ ವಿಶ್ರಾಂತಿ ಗೃಹ.

ಚಿನ್ಮಯ ೮-೩೫ ಜ್ಞಾನ ಸ್ವರೂಪ.

ಚೀರಣ ೧೪೦-೬೪ ಒಂದು ವಿಧ ವಾದ್ಯ.

ಚೋಚ ೪೮–೩೪ ತೆಂಗು.

ಚೋಹ ೬೩–೩೮ ವೇಷ.

ಛಳಯ ೧೩೯–೫೮ ಚಿಮುಕಿಸುವಿಕೆ.

ಜನಪದ ೧೫–೧೭ ದೇಶ.

ಜಾಲ ೪೮–೩೪ ಜಾಲಿ (?) ಮರ.

ಜೀವನ ೪೬–೨೩ ನೀರು.

ಜೋಡು ೧೭೮–೫೦ (೧) ಕೆರ, ಪಾದರಕ್ಷೆ (೨) [ಪಗಡೆಯಲ್ಲಿ] ಎರಡು, ದುಗ.

ಡಂಬ ೧೭೧–೨೧ ಮೋಸ, ಕಪಟ.

ಢಾಳ ೧೭೮–೫೧ (೧) ಕಾಂತಿ (೨) ದಾಳ

ತಕ್ರ ೧೬೫–೨೨ ಅರ್ಧ ನೀರು ಅರ್ಧ ಮೊಸರನ್ನು ಸೇರಿಸಿ ಕಡೆದು ಬೆಣ್ಣೆಗಳೆದ ಮಜ್ಜಿಗೆ

ತಟ್ಬಾಋ ೧೧೦–೨೮ ಬಳಲು.

ತತ್ತ ೧೮–೩೩ ಕೂಡಿದ, ಸೇರಿದ.

ತರಹರಿಸು ೨೪–೪ ನಿಲ್ಲು, ಸಹಿಸು.

ತಳರು ೨೫–೯ ಹೊರಡು, ಚಲಿಸು.

ತಳುಗು ೧೦–೪೦ ತಂಗು, ನೆಲಸು.

ತಳುವು ೮೯–೧೭ ತಡಮಾಡು.

ತಾರಕ ೩೫–೧೫ ಜೋರು ಧ್ವನಿ, ಎತ್ತು ಧ್ವನಿ.

ತಾರಕಾ ೧೭೯–೫೪ (೧) ನಕ್ಷತ್ರ (೨) ಒಬ್ಬ ರಾಕ್ಷಸನ ಹೆಸರು.

ತಾರ್ಕಣೆ ೧೯೨–೩೧ ಪ್ರತ್ಯಕ್ಷ ಪ್ರಮಾಣ

ತಾಳಿದ ೧೬೩–೧೫ ತರಕಾರಿ ಅಡಿಗೆಯ ಒಂದು ಬಗೆ.

ತಿಗುರು ೯೨–೩೦ ಸುಗಂಧ ದ್ರವ್ಯ.

ತಿರುಪು ೩೬–೧೯ ನಾಟ್ಯ ಭೇದ, ತಿರುಗುವುದು.

ತುಂಬುಗಾಯ್ ೧೬೨–೯ ಸಂಬಾರ ಪದಾರ್ಥಗಳನ್ನು ತುಂಬಿ ಬೇಯಿಸಿದ ಕಾಯಿ.

ತುಂಬುರವೀಣೆ ೧೫೭–೫೯ ತುಂಬುರರು ಬಳಸುವ ವೀಣೆ.

ತೊಡಚು ೯೫–೪೪ ಹಾಕು, ಧರಿಸು

ತೊಡರು ೧೭೧–೨೦ (ಕಾಲು) ಸರಪಣಿ, ಚೈನು.

ತೋಮರ ೭೫–೯ ಈಟಿ.

ತೋರ ೯೩–೩೬ ದಪ್ಪ, ಗಾತ್ರ.

ದಸಿ ೪೧–೨ (ಮೊನೆಯಾದ) ದೊಣ್ಣೆ.

ದಿವೌಕಸ ೧೯೦–೨೩ ದೇವತೆ.

ದೀಕ್ಷೋಪವಾಸ ೧೯೯–೧ ದೀಕ್ಷೆಯ ನಿಮಿತ್ತ ಮಾಡುವ ಮೂರು ಅಥವಾ ಆರು ಉಪವಾಸಗಳು.

ದೋಳು ೧೪೦–೬೪ ಡೋಲು.

ದ್ರುತ ೩೪–೧೨ ಷಡಂಗಗಳಲ್ಲಿ ಒಂದು, ಎರಡು ಅಕ್ಷರದ ಕಾಲ.

ದ್ರೋಣ ೨೭–೨೦ ನದೀ ದಡದ ಮೇಲಿರುವ ಊರು.

ದ್ವಾದಶಗಣ ೯–೩೭ ಸಮವಸರಣದಲ್ಲಿ ಇರುವ ಹನ್ನೆರಡು ಸಭೆಗಳು.

ನಾಗಪೋತ ೨೦೩–೧೮ ಆನೆಯ ಮರಿ.

ನಾಗ ಬ (ವ)ಲಿ ೧೦೩–೭೯ ವಿವಾಹದ ನಾಲ್ಕನೆಯ ದಿನ ನಡೆಯುವ ಒಂದು ಮಂಗಳ ಕಾರ್ಯ.

ಬಾಣ್ಗೆಡು ೧೦೯–೨೩ ನಾಚಿಕೆಗೆಡು, ಲಜ್ಜಾಹೀನನಾಗು.

ನಿಕುರುಂಬ ೯೯–೬೨ ಗುಂಪು, ಸಮೂಹ.

ನಿಧಾನ ೩೮–೨೮ ನಿಕ್ಷೇಪ.

ನಿಮಿತ್ತ ೩೩–೬ ಶಕುನ.

| | |
|---|---|
| ನಿರಘ | ೨೯೯–೪೩ ಪಾಪವಿಲ್ಲದ, ಪುಣ್ಯ. |
| ನಿವಾಳಿಸು | ೧೫೯–೬೫೦ ದೃಷ್ಟಿ ತೆಗೆ, ಇಳಿತೆಗೆ. |
| ನೀಲಕಂಠ | ೨೦೩–೨೦ ನವಿಲು. |
| ನೆತ್ತ | ೧೭೮–೫೦ ಪಗಡೆ. |
| ನೆರಪು | ೬–೨೪ ಸಂಗ್ರಹಿಸು, ಕೂಡಿ ಹಾಕು. |
| ನೇವಣೆ | ೩೬–೧೯ ನಾಟ್ಯಪ್ರಭೇದ. |
| ಪಂಚಮುಖ | ೪–೧೬ ಸಿಂಹ. |
| ಪುಂಡರೀಕ | ೩೦–೩೩ (೧) ಕಮಲ (೨) ಗಿಳಿ |
| ಪೊಂದಳಿಗೆ | ೧೫೪–೪೩ ಚೆನ್ನದ ಹರಿವಾಣ, ತಟ್ಟೆ. |
| ಪಚಿಸು | ೧೬೧–೭ ಬೇಯಿಸು. |
| ಪಟ್ಟೆ | ೫೮–೩೪ ರೇಷ್ಮೆ ಬಟ್ಟೆ. |
| ಪಡಿ | ೨೦–೪೦ ಪ್ರತಿ, ಸಮ. |
| ಪತತ್ರಿ | ೧೧–೨ ಹಕ್ಕಿ. |
| ಪನಸ | ೧೫–೨೧ ಹಲಸು. |
| ಪರಡಿ | ೧೬೪–೧೭ (ಪಾಯಸಕ್ಕೆ ಹಾಕುವ) ಗೋಧಿಯ ದುಂಡು ಸೇವಗೆ. |
| ಪರಿಘ | ೭೫–೯ ಕಬ್ಬಿಣದ ದೊಣ್ಣೆ. |
| ಪರೀಷಹ | ೧೯೩–೩೫ ಹಸಿವು, ನೀರಡಿಕೆ, ಚಳಿ, ಬಿಸಿಲು ಮುಂತಾದ ಇಪ್ಪತ್ತೆರಡು ಉಪದ್ರವಗಳು. |
| ಪರುಟವಿಸು | ೯೩–೩೭ ಅಗಲವಗಿ ಇಡು, ವಿಸ್ತರಿಸು. |
| ಪಳಿದ್ಯ | ೧೬೩–೧೬ ಮಜ್ಜಿಗೆ ಹುಳಿ. |
| ಪಾನೀಯ ಶಾಲೆ | ೧೬–೨೪ ಅರವಟ್ಟಿಗೆ. |
| ಪಾಯಕ | ೧೧೭–೨ ಕಾಲಾಳು, ಪದಾತಿ. |

ಪಾರಕು ೧೯೯–೨ ಹಾರಕ, ಒಂದು ವಿಧ ಧಾನ್ಯ.

ಪಾರಾವತ ೭೩–೩ ಪಾರಿವಾಳ.

ಪೀನ ೧೯೨–೩೧ ದಪ್ಪ, ಗಾತ್ರ.

ಪೀವರ ೯೪–೩೯ ದಪ್ಪ, ಗಾತ್ರ.

ಪುಷ್ಕರ ೮೮–೧೪ (೧) ಕೊಳ (೨) ಆನೆಯ ಸೊಂಡಿಲಬಾಯಿ.

ಪೂಗ ೩೨–೨ ಅಡಕೆ ಮರ.

ಪೇಏ ೯೯–೬೨ ಗುಂಪು. ಸಮೂಹ.

ಪೈಠಣೆ ೨೦೧–೧೨ ಪೈಠಣ ಎಂಬ ನಗರದಲ್ಲಿ ತಯಾರಾದ ರೇಷ್ಮೆವಸ್ತ್ರ.

ಪೊಲಬು (ಹೊಲಬು) ೧೯–೩೮ ರೀತಿ, ಮಾರ್ಗ.

ಪ್ರಜ್ಞಪ್ತಿ ೭೪–೬ (ಜೈನ) ಒಂದು ವಿದ್ಯದ ಹೆಸರು.

ಪ್ರತ್ಯಾಖ್ಯಾನ ೧೯೯–೨ ಸಂಯಮ, ವ್ರತ, ನಿಯಮಗಳಿಂದ ಕ್ರೋಧಾದಿ ಕಷಾಯಗಳನ್ನು ಕಡಿಮೆ

ಮಾಡುವುದು.

ಪ್ರೇಮಿತ ೨೭–೨೦ ಪ್ರೀತಿಸಲ್ಪಟ್ಟ

ಪ್ಲುತ ೩೪–೧೨ ಷಡಂಗಗಳಲ್ಲಿ ಒಂದು, ಹನ್ನೆರಡು ಅಕ್ಷರಗಳನ್ನು ಉಚ್ಚರಿಸುವ ಕಾಲ.

ಬೊಂಬುಳಿ ೧೪೦–೬೪ ಚಿಕ್ಕತಮಟೆ.

ಬಚ್ಚಣೆ ೧೧೧–೩೨ ಮುಸುಕು, ಮುಚ್ಚಳ.

ಬತ್ತಿಸು ೮೯–೧೯ ಮೂವತ್ತೆರಡು.

ಬನ್ನಿ ೧೭೬–೩೯ (೧) ದಯಮಾಡಿಸಿ, ಇತ್ತ ಬನ್ನಿ (೨) ಬನ್ನಿಯ ಸೊಪ್ಪು.

ಬರ್ಹಿರ್ಮುಖ ೧೮೯–೧೯ ದೇವತೆ.

ಬವರ ೨೩-೩ ಯುದ್ಧ.

ಬಾಸಿಗ ೧೦೦- ೬೬ ಮದುವೆಯಲ್ಲಿ ವಧೂವರರ ಹಣೆಯ ಮೇಲೆ ಕಟ್ಟುವ ಮಂಗಳ ಸೂಚಕ

ಪಟ್ಟಿ, ಬಾಸಿಂಗ,

ಬಿಸಿಗದಿರ ೫೯-೩೬ ಸೂರ್ಯ.

ಬಿಸಿಲುವಕ್ಕಿ ೯೯-೬೪ ಚಕ್ರವಾಕ.

ಬೆಣ್ಣೆಗಾಯಿ ೧೬೨-೯ ಬೆಣ್ಣೆ ಉಪಯೋಗಿಸಿ ತಯಾರಿಸಿದ ಒಂದು ವಿಧ ತಾಳಿದ.

ಬೆಸಲು ೭೫-೯ ಗರ್ಭ.

ಬೇವಸ ೨೦೫-೨೭ ದುಃಖ, ಚಿಂತೆ.

ಬೇಳು ೬೬-೨೪ ಹೋಮ ಮಾಡು

ಭಗಣ ೧-೨ ನಕ್ಷತ್ರ ಸಮೂಹ.

ಭವನಾಮರ ೧೩-೧೦ ಅಸುರ, ನಾಗ, ಸುಪರ್ಣಾದಿ ಹತ್ತುಪ್ರಕಾರದ ದೇವರು, ಪಾತಾಳ ವಾಸಿ.

ಭವಿತವ್ಯ ೨೯-೨೭ ಮುಂದಾಗುವುದು, ಭವಿಷ್ಯ.

ಭವ್ಯ ೧೯-೩೫ ಸಮ್ಯಕ್‌ಜ್ಞಾನ ದರ್ಶನ ಚರಿತ್ರಗಳಲ್ಲಿ ಪರಿಣತನಾಗುವವನು.

ಭಾ ೧೧-ಪ್ರಾರ್ಥನೆ ಪ್ರಕಾಶ, ಕಾಂತಿ.

ಭಾವಕಿ ೩೬-೧೯ ಭಾವವನ್ನು ತಿಳಿದವಳು, ನೃತ್ಯಗಾತಿ.

ಭೈತ್ರ ೧೦-೪೧ ಹಡಗು, ದೋಣಿ.

ಭ್ರಮರಿ ೩೬-೧೯ ಮಾರ್ಗ ಆಕಾಶ ಚಾರಿಗಳಲ್ಲಿ ಒಂದು, ಅತಿಕ್ರಾಂತ ಚಾರಿಯಂತೆ ಕಾಲನ್ನಿರಿಸಿ

(ಕುಂಚಿತ ಪಾದವನ್ನೆತ್ತಿ) ತ್ರ್ಯಸ್ರಾಕಾರದಲ್ಲಿ ತೊಡೆಯನ್ನು ಮೇಲ ಕೆತ್ತಿ ಇನ್ನೊಂದು

ಕಾಲಿನ ಅಂಗಾಲಿನಿಂದ ಸುತ್ತುವುದು.

ಮಂದ್ರ ೩೫-೧೫ ಕೆಳಧ್ವನಿ, ಮೆಲುಧ್ವನಿ.

ಮಕರಿಕಾ ಪತ್ರ ೯೩-೩೮ ಕೆನ್ನೆಯ ಮೇಲೆ ಅಲಂಕಾರವಾಗಿ ಬರೆಯುವ ಚಿತ್ರ.

ಮಗ್ಗು ೪-೧೭ ಬಗ್ಗು, ಬಾಗು.

ಮಚ್ಚು ೪೮-೩೨ ಮೆಚ್ಚು.

ಮಡಂಬ ೨೭-೨೦ ಐದುನೂರು ಗ್ರಾಮವನ್ನೊಳಗೊಂಡ ಮುಖ್ಯ ಪಟ್ಟಣ.

ಮರಕತ ೫೧-೨ ಒಂದು ವಿಧ ರತ್ನ, ಪಚ್ಚೆ, ಹಸಿರು.

ಮಲ್ಲಗಂಭ ೧೧೮-೬ ಬಲವಾದ ಕಂಬ, ದಪ್ಪಕಂಬ.

ಮಸೆಗಾಯ್ ೧೬೨-೯ ಮೆಸೆದು (ಕಡೆದು) ಮಾಡಿದ ಕಾಯಿ, ಒಂದು ವಿಧ ತಾಳಿದ.

ಮಾಗುಳಿ ೧೬೨-೧೧ ಉಪ್ಪಿನ ಕಾಯಿಗೆ ಉಪಯೋಗಿಸುವ ಕಲ್ಲುಪೊಟರೆಯಲ್ಲಿ ಬೆಳೆ
ಯುವ

ಸುವಾಸನೆಯುಳ್ಳ ಒಂದು ಬೇರು.

ಮಾದು ೨೦೫-೧೯ ಮಾಯಿ, ವಾಸಿಯಾಗು.

ಮಾರ್ಬಲ ೨೨-೪೯ ಶತ್ರುಸೈನ್ಯ.

ಮಾಸಾಳು ೧೫೫-೪೭ ವೀರ, ಪರಾಕ್ರಮಿ.

ಮಿಸುನಿ ೧೭೪-೩೩ ಚಿನ್ನ.

ಮಿನ್ ೩೦-೩೩ (೧) ನಕ್ಷತ್ರ (೨) ಮಿನು.

ಮುರಜ ೩೩-೫ ಮದ್ದಲೆ

ಮುಕ್ಕೊಡೆ(ಛತ್ರತ್ರಯ) ೧೬೭- ಪ್ರಾರ್ಥನೆ. ಅಷ್ಟಪ್ರಾತಿಹಾರ್ಯಗಳಲ್ಲಿ ಒಂದು, ಒಂದರ ಮೇಲೆ
ಒಂದು

ಇರುವ ಮುರು ಛತ್ರಿಗಳು.

ಮುದ್ಗರ ೭೫-೯ ಉಕ್ಕಿನ ಗದೆ.

ಮುಸುಂಡಿ ೭೫-೯ ಮೂರು ಮೊನೆಯುಳ್ಳ ಒಂದು ಆಯುಧ.

ಮೂಗುರಿ ೭-೩೦ ಮುಂಗಲಿ, ಒಂದು ಪ್ರಾಣಿ.

ಮೂಱುರತ್ನ(ರತ್ನತ್ರಯ) ೧೬೭-ಪ್ರಾರ್ಥನೆ. ಸಮ್ಯಕ್‌ಜ್ಞಾನ, ದರ್ಶನ, ಚಾರಿತ್ರಗಳು.

ಮೊಗವೀಣೆ ೧೨೮-೮ ಮುಖವೀಣೆ.

ಮೊರಡಿ ೧೬೦-೩ ಗುಡ್ಡ, ದಿಣ್ಣೆ.

ಮೊರಹು ೮೯-೧೮ ಘೋಷ, ಧ್ವನಿ

ಮೌವರಿ ೧೨೮-೧೧ ಮೋರಿ, ಒಂದು ವಾದ್ಯದ ಹೆಸರು, ಓಲಗ.

ರಂಭಾ ೧೫೨-೩೪ ಬಾಳೆ.

ರದನ ೨೦೪-೨೪ ಹಲ್ಲು.

ರಸ ೨೦೧-೧೧ ವನಸ್ಪತಿಗಳ ದ್ರವ.

ರಸದಾಳಿ ೧೭-೨೬ ಶ್ರೇಷ್ಠ ಜಾತಿಯ ಬಿಳಿಯ ಕಬ್ಬು.

ರಸಾಲ ೭-೨೭ ಮಾವು.

ರಾಕಾಚಂದ್ರ ೯೪-೩೯ ಹುಣ್ಣಿಮೆಯ ಚಂದ್ರ.

ರುದ್ರವೀಣೆ ೧೫೭-೫೯ ವೀಣೆಯಲ್ಲಿ ಒಂದು ವಿಧ.

ಲಳಿ ೩೬-೧೯ (ನಾಟ್ಯದಲ್ಲಿ) ನೆಗೆದು ನಿಲ್ಲುವುದು.

ಲಾಗು(ಲಂಘನ) ೩೬-೧೯ (ನಾಟ್ಯದಲ್ಲಿ) ನೆಗೆಯುವುದು.

ಲಾಜೆ ೧೪೦-೬೫೦ ಅರಳು.

ಲೋವೆ ೧೮-೩೩ ಮಂಟಪದ ಇಳಿಮಾಡು.

ಲೌಡಿ ೭೫-೯ ಕಬ್ಬಿನದ ದೊಣ್ಣೆ. ಒಂದು ಆಯುಧ.

ವರ್ಗತ್ರಿತಯ ೧೯-೩೮ ಉತ್ತಮ, ಮಧ್ಯಮ ಜಘನ್ಯಗಳೆಂಬ ಮೂರು ವರ್ಗಗಳು.

ವಾದಿನೌಷಧ ೨೦೫-೨೯ ಸಿದ್ಧೌಷಧ (?)

ವಿಸರ ೧೩೪-೩೫ ಸಮೂಹ, ಗುಂಪು.

ವಿಷ್ಟಪ ೧–೩ ಲೋಕ.

ವೈಕುರ್ವಣ ೧೪೭–೧೩ ವಿಕುರ್ವಣ ಶಕ್ತಿ. ಶರೀರವನ್ನು ಬೇಕಾದ ರೀತಿಯಲ್ಲಿ ಮಾಡಿ ಕೊಳ್ಳುವುದು.

ದೇವತೆ, ನಾರಕಿ ಮತ್ತು ತಪಸ್ಸು ಮಾಡಿದ ಪುಣ್ಯ ಪುರುಷರಿಗೆ ಮಾತ್ರ ಇದು ಸಾಧ್ಯ.

ಶಾಬ ೨೦೩–೨೦ ಮರಿ.

ಶಾಲೂರ ೧೧–೨ ಕಪ್ಪೆ.

ಶೀಕರ ೨೦೬–೨೧ ತುಂತುರು.

ಶುಂಡಾಲ ೧೩೯–೬೧ ಸೊಂಡಿಲು.

ಷಂಡ ೨೮–೨೨ ಸಮೂಹ.

ಷಡ್ಗುಣ ೧೯–೩೮ ಅನಂತ ಭಾಗ, ಅಸಂಖ್ಯಾತ ಭಾಗ, ಸಂಖ್ಯಾತ ಭಾಗ, ಸಂಖ್ಯಾತ ಗುಣಭಾಗ

ಅಸಂಖ್ಯಾತ ಗುಣಭಾಗ, ಅನಂತ ಗುಣಭಾಗ ಎಂಬ ಆರು ಗುಣಗಳು.

ಸಂವಾಹನ ೨೭–೨೦ ಶೆಲಾವ್ಯೂಢ ಧಾನ್ಯಗಳನ್ನು ಸಂಗ್ರಹಿಸಿ ಉಪಭೋಗಿಸುವ ಜನರ ಆವಾಸಸ್ಥಾನ.

ಸಂಸ್ಕೃತಿ ೨–೭ ಸಂಸಾರ.

ಸಪ್ತತಪ ೨೦೦–೬ ಸುದೀಪ್ತಿ, ತಪ್ತ, ಮಹಾಘೋರ, ಸಲ್ಲಿಲಿತ ಘೋರ, ಪರಾಕ್ರಮ ಘೋರ,

ಬ್ರಹ್ಮಚರಿ ಸಲ್ಲಿಲಿತಗಳೆಂಬ ಏಳು ತಪಗಳು,

ಸಪ್ತಾಂಗ ೧೯೩–೩೯ ರಾಜ್ಯದ ಏಳು ಅಂಗಗಳು–ಅರಸು, ಮಂತ್ರಿ, ಮಿತ್ರ, ಕೋಶ, ರಾಷ್ಟ್ರ,

ದುರ್ಗ, ಬಲಗಳು.

ಸಬಳ ೭೫–೯ ಕೊಂತ, ಈಟಿ.

ಸಮವಶ್ರುತಿ ೮–೩೨ ದೇವೇಂದ್ರನು ಕುಬೇರನಿಗೆ ಆಜ್ಞಾಪಿಸಿ ಅರ್ಹಂತನಿಗಾಗಿ

ಸಮವಸರಣ

ಮಂಟಪ ರಚಿಸುತ್ತಾನೆ. ಅಲ್ಲಿ ಹನ್ನೆರಡು ವಿಧ ಸಭೆಗಳು, ಮನುಷ್ಯ,

ತಿರ್ಯಂಚ,

ದೇವತೆಗಳು ಇರುತ್ತಾರೆ. ಮಧ್ಯದಲ್ಲಿ ಸಿಂಹಪೀಠದಲ್ಲಿ ಚತುರಂಗುಲ ಬಿಟ್ಟು

ಅರ್ಹಂತ

ಆಸೀನನಾಗಿರುತ್ತಾನೆ. ಓಂಕಾರ ದಿವ್ಯ ಧ್ವನಿಗಳನ್ನು ಗಣಧರರು

ವ್ಯಾಖ್ಯಾನಿಸುತ್ತಾರೆ.

ಇದಕ್ಕೆ ಸಮವಶ್ರುತಿ, ಸಮವಸರಣ ಎನ್ನುವರು.

ಸರಿ ೮೦–೩೨ ಮಳೆ.

ಸರ್ಷಪ ೧೬೧–೭ ಸಾಸುವೆ.

ಸಹಕಾರ ೧೫–೨೧ ಒಂದು ಗಿಡದ ಹೆಸರು.

ಸಾರಣೆ ೧೫೦–೨೮ ಸಾರಿಸುವಿಕೆ.

ಸಾಲ್ವ ೪೫–೧೭ ಗಿಡಗ.

ಸಿದ್ಧ ೧–೩ ಎಂಟು ಕರ್ಮಗಲನ್ನು ಗೆದ್ದವನು.

ಸುಖಿಯ ೧೬೮–೧೭ ಸುಕ್ಕಿನುಂಡೆ, ಹಿಂದು ವಿಧ ಸಿಹಿ ತಿಂಡಿ.

ಸುಗಿ ೨೮–೨೨ ಹೆದರು, ಭಯಪಡು.

ಸುರಗಿ ೭–೨೭ ಒಂದು ಹೂವಿನ ಹೆಸರು.

ಸೂಡು ೧೮–೩೪ ಹಾಕು; ಧರಿಸು.

ಸೂತ್ರಿಕ ೩೬–೧೮ ಸೂತ್ರವನ್ನು ಹಿಡಿದು ಆಡಿಸುವವನು.

ಸೂಪ ೧೬೩–೧೩ ತೊವ್ವೆ.

| | |
|---|---|
| ಸೂಸಲುಗಾಯ್ | ೧೬೨–೯ ಎಳ್ಳುಪುಡಿ ತುಂಬಿ ಬೇಯಿಸಿದ ಕಾಯಿ. |
| ಸೆಲ್ಲೆಹ | ೩೫–೯ ಶಲ್ಯ. ಭರ್ಜಿ. |
| ಸೊದೆ(ಸುಧಾ) | ೧೫೦–೨೮ ಸುಣ್ಣ, |
| ಸೋನೆ | ೫–೨೦ ಎಡಬಿಡದೆ ಬೀಳುವ ತುಂತುರು ಮಳೆ. |
| ಸೋಹು | ೧೬–೨೩ ಅಟ್ಟು,ಓಡಿಸು. |
| ಹದಿರು | ೧೭೮–೪೮ ಹಾಸ್ಯ. |
| ಹಮ್ಮಿಕೆ | ೮೦–೩೧ ಹಮ್ಮು, ಗರ್ವ. |
| ಹರಿ | ೮೧–೩೮ ಸಿಂಹ. |
| ಹಲುದಿನು | ೬೭–೨೮ ಹಲ್ಲು ಕಡಿ. |
| ಹಸರ | ೧೧೩–೪೧ ಪ್ರಸರ, ವಿಸ್ತಾರ. |
| ಹಸ್ತಿನಿಂಬ | ೧೬೧–೭ ಗಜನಿಂಬೆ. |
| ಹಳಚಾಡು | ೪೫–೧೮ ಮೇಲೆ ಬಿದ್ದು ಹೊಡೆದಾಡು. |
| ಹೂರಿಗೆ | ೧೬೪–೧೭ ಒಂದು ವಿಧ ಸಿಹಿ ಭಕ್ಷ್ಯ. |
| ಹೊಗರು | ೯೨–೩೦ ಕಾಂತಿ, ಪ್ರಕಾಶ. |
| ಹೊರಜೆ | ೧೧೭–೧ ಮಿಣಿ, ದಪ್ಪ ಹಗ್ಗ. |
| ಹೋರಟೆ | ೫೧–೧೦ ಹೋರಾಟ, ಘರ್ಷಣೆ. |
| ಹೋರು | ೪೧–೧೭ ಹೋರಾಡು. |
| ಹೋರೆ | ೮೬–೬ ಲಗ್ನ. |